ಶಿರಾ ತಾಲ್ಲೂಕಿನ ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಕಾರ್ಯಕ್ರಮ

೪೭೭. ಶ್ರೀ ಸಿ. ಪಿ. ಮೂಡಲ ಗಿರಿಯಪ್ಪ (ಶಿರಾ) .—ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಶಿರಾ ತಾಲ್ಲೂಕಿನಲ್ಲಿ ಸುಮಾರು ೬ ಲಕ್ಷ ರೂಪಾಯಿಗಳ ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಕಾರ್ಯಕ್ರಮದ ವೇರೆಗೆ ಕಾಮಗಾರಿಗಳನ್ನು ೧೭-೬-೮೫ ರಿಂದ ೩೦-೬-೮೫ರೊಳಗೆ ಮುಗಿಸುವಂತೆ ಸರಕಾರದವರು ಆದೇಶ ಕೊಟ್ಟಿದ್ದು ನಿಜವೆ ?

ಆ) ಹಾಗಿದ್ದಲ್ಲಿ ೧೪ ದಿನಗಳಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಕಾಮಗಾರಿ ಮುಗಿಸುವಂತೆ ಆದೇಶ ನೀಡಲು ಕಾರಣವೇನು ?

ಇ) ಹಾಗಿದ್ದಲ್ಲಿ ಇಷ್ಟು ಅಲ್ಪ ಅವಧಿಯಲ್ಲಿ ಮುಗಿಸುವ ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿರಲು ಸಾಧ್ಯವೆ ?

ಈ) ಇನ್ನು ಮುಂದಾದರೂ ಸಾಕಷ್ಟು ಸಮಯ ಕೊಟ್ಟು ಯೋಜನೆಯ ಸದುದ್ದೇಶವನ್ನು ಪಡೆಯಲಾಗುತ್ತದೆಯೆ ?

ಉ) ಸಣ್ಣ ನೀರಾವರಿ ಕಾಮಗಾರಿಗಳನ್ನು ಈ ಅವಧಿಯಲ್ಲಿ ನಿರ್ವಹಿಸಲಾಗಿದೆಯೆ ?

ಊ) ಗೋಕಟ್ಟೆಗಳ ಅಭಿವೃದ್ಧಿಗೆ ಹಣ ಖರ್ಚು ಮಾಡಿ ಸಣ್ಣ ನೀರಾವರಿ ಕಾಮಗಾರಿಗಳೆಂದು ಹಣ ವ್ಯಯ ಮಾಡುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ಪಿ. ಪ್ರಕಾಶ್ (ರಾಜ್ಯ ಕೃಷಿ ಮಂತ್ರಿಗಳು) .—

ಅ) ಹೌದು.

ಆ) ತೀವ್ರ ಅಭಾವದ ಪ್ರಯುಕ್ತ ಬಡ ಜನರಿಗೆ ಕೂಲಿ ಒದಗಿಸಲು ಈ ಜರೂರು ಕ್ರಮವನ್ನು ತೆಗೆದುಕೊಳ್ಳಲಾಯಿತು.

ಇ) ಅಲ್ಪ ಅವಧಿಯಲ್ಲಿ ಮುಗಿಸುವ ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿರುವುದಿಲ್ಲ ಮೆಂತಲೇ ಜೂನ್ ೩೦ ರೊಳಗೆ ಮುಗಿಸಿ ಎಂದು ಕೊಟ್ಟಿರುವ ಆದೇಶವನ್ನು ಜುಲೈ ತಿಂಗಳ ಒಳಗಾಗಿ ಮುಗಿಸಿ ಎಂದು ಅವಧಿಯನ್ನು ಒಂದು ತಿಂಗಳು ಮುಂದುವರೆಸಲಾಯ್ತು.

ಈ) ಹೌದು

ಉ) ಇಲ್ಲ

ಊ) ಇಲ್ಲ

ರಾಜ್ಯದಲ್ಲಿರುವ ಉರ್ದು ಶಾಲಾ ಕಾಲೇಜುಗಳು

೬೭೬. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ) .—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಉರ್ದು ಶಾಲಾ ಕಾಲೇಜುಗಳ ಸಂಖ್ಯೆ ಎಷ್ಟು ?

ಆ) ಇವುಗಳ ಪೈಕಿ ಉಪಾಧ್ಯಾಯರಿಲ್ಲದ ಶಾಲಾ ಕಾಲೇಜುಗಳೆಷ್ಟು ?

ಇ) ಉಪಾಧ್ಯಾಯರಿಲ್ಲದ ಶಾಲಾ ಕಾಲೇಜುಗಳಿಗೆ ಉಪಾಧ್ಯಾಯರನ್ನು ನೇಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು) .—

ಅ) ಉರ್ದು ಪ್ರಾಥಮಿಕ ಶಾಲೆಗಳು ೨೯೮೦, ಉರ್ದು ಪ್ರೌಢ ಶಾಲೆಗಳು ೯೦. ಉರ್ದು ಕಿರಿಯ ಕಾಲೇಜುಗಳು ಇಲ್ಲ, ಉರ್ದು ಹಿರಿಯ ಕಾಲೇಜುಗಳು ಇಲ್ಲ

ಆ) ಇಲ್ಲ

ಇ) ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.